**ಸಿ.ಸಿ.ನಂ.: 2241/2025**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **24-04-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಶ್ರೀ.ಎನ್.ಎಮ್.ಎನ್. ವಕೀಲರಿಂದ**

1. ವಿಷ್ಣು ಹೊನ್ನಪ್ಪಾ ನಾಯ್ಕ ಇವರು ಬಾಡದವರಾಗಿದ್ದು, ಇಂದಿರಾ ಮಹಾದೇವ ನಾಯ್ಕ ಇವರು ದೇವರಹಕ್ಕಲು ಕುಮಟಾ ದವರು ಅಗಿರುತ್ತಾರೆ. ಆರೋಪಿಯನ್ನು ಸಾಲವನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ ಆಧಾರ ಕಾರ್ಡ, ಮನೆ ತೇರಿಗೆ ಪಾವತಿ ಹಾಗೂ ಪಡಿತರ ಚೀಟಿಯನ್ನು ನೀಡಿರುತ್ತಾರೆ. ನಮ್ಮ ಫಿರ್ಯಾದಿ ಸಂಸ್ಥೆಗೆ ಹನೇಹಳ್ಳಿ ಯನ್ನು ಹೊರತುಪಡಿಸಿ ತದಡಿ, ಮೊರಬ್ಬಾ ಹಾಗೂ ಗೋಕರ್ಣ ಹಾಗೂ ಕುಮಟಾದಲ್ಲಿ ಶಾಖೆಗಳು ಇವೆ.

2. ವಿಷ್ಣು ಹೊನ್ನಪ್ಪಾ ನಾಯ್ಕ ಹಾಗೂ ಇಂದಿರಾ ಮಹಾದೇವ ನಾಯ್ಕ ಇವರು ಈ ಪ್ರಕರಣದ ಸಾಲಗಾರನ ಜಾಮೀನುದಾರರಾಗಿದ್ದು ನಮ್ಮ ಕುಮಟಾ ಶಾಖೆಗೆ ಬಂದು ಸಾಲಗಾರರು ಸಾಲವನ್ನು ಪಡೆದುಕೊಂಡಿರುತ್ತಾರೆ. ಆರೋಪಿತಳು ಹುಬ್ಬನಗೇರಿಯವರಾಗಿರುತ್ತಾರೆ. ಈ ಪ್ರಕರಣದ ಸಾಲವನ್ನು ನೀಡುವ ಸಂದರ್ಭದಲ್ಲಿ ನಾನು ಕುಮಟಾ ಶಾಖೆಯ ಶಾಖಾ ವ್ಯವಸ್ಥಾಪಕನಾಗಿರುವುದಿಲ್ಲ. ಸದ್ರಿ ಸಂದರ್ಭದಲ್ಲಿ ನಾನು ನಮ್ಮ ಪ್ರಧಾನ ಶಾಖೆಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ನಮ್ಮ ಕುಮಟಾ ಶಾಖೆಯು ಉದ್ಘಾಟನೆಗೊಂಡು 2-3 ವರ್ಷ ಆಗಿರುತ್ತದೆ. ಅರೋಪಿಗೆ ಸಾಲವನ್ನು ನೀಡುವ ಸಂದರ್ಭದಲ್ಲಿ ಕುಮಟಾ ಶಾಖೆಯ ಶಾಖಾ ವ್ಯವಸ್ಥಾಪಕರು ಗಿರೀಶ್ ಗಣಪತಿ ನಾಯ್ಕ ಇವರಾಗಿದ್ದರು. ನಮ್ಮ ಹಳೇಹಳ್ಳಿಯ ಮುಖ್ಯ ಶಾಖೆಯ ಕಾರ್ಯ ವ್ಯಾಪ್ತಿಯು ಜಿಲ್ಲಾ ವ್ಯಾಪ್ತಿಯಲ್ಲಿ ಇರುತ್ತದೆ. ನಮ್ಮ ಫಿರ್ಯಾದಿ ಸಂಸ್ಥೆಗೆ ಜಿಲ್ಲಾ ವ್ಯಾಪ್ತಿಯಾಗಿ 1 ವರ್ಷ ಆಗಿರುತ್ತದೆ. ಈ ಮೊದಲು ಕೇವಲ ಕುಮಟಾ

**ಸಿ.ಸಿ.ನಂ.: 2241/2025**

ಪಿ.ಡಬ್ಲ್ಯೂ:1

ತಾಲೂಕು ವ್ಯಾಪ್ತಿಯನ್ನು ಹೊಂದಿರುತ್ತದೆ. ನಾವು ಕುಮಟಾ ವ್ಯಾಪ್ತಿಯಲ್ಲಿ ಇರುವಾಗ ಬಾಸೊಳ್ಳಿ ಗ್ರಾಮವನ್ನು ಹೊರತುಪಡಿಸಿ ಇಡೀ ಕುಮಟಾ ತಾಲೂಕಿಗೆ ಸಾಲವನ್ನು ನೀಡಬಹುದು. ಆರೋಪಿತಳಿಗೆ ಸಾಲವನ್ನು ನಮ್ಮ ಕುಮಟಾ ಶಾಖೆಯಿಂದ ನೀಡಲಾಗಿದೆ ಎಂಬ ಬಗ್ಗೆ ನಮ್ಮ ಫಿರ್ಯಾದಿಯಲ್ಲಿ ನಮೂದು ಮಾಡಿರುವುದಿಲ್ಲ. ನಮ್ಮ ಕುಮಟಾ ಶಾಖೆಯ ಕಾರ್ಯ ವ್ಯಾಪ್ತಿ ಎಲ್ಲಿಯವರೆಗೆ ಬರುತ್ತದೆ ಎಂದರೆ ಸಾಕ್ಷಿಯು ನಮ್ಮ ಫಿರ್ಯಾದಿ ಸಂಸ್ಥೆಗೆ ಜಿಲ್ಲಾ ವ್ಯಾಪ್ತಿ ಇರುವುದರಿಂದ ಶಾಖೆಗೆ ಸಂಬಂಧಿಸಿದಂತೆ ಯಾವುದೇ ವ್ಯಾಪ್ತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಈ ಕುರಿತಾಗಿ ನಮ್ಮ ಬೈಲಾದಲ್ಲಿ ನಮೂದಾಗಿರುತ್ತದೆ. ಶಾಖೆಗಳಿಗೆ ಕಾರ್ಯವನ್ನು ನೀಡಿದ ಕುರಿತಾಗಿ ನಮ್ಮ ಬೈಲಾವನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಯನ್ನು ನಾವು ನಿರ್ವಹಿಸುವುದಿಲ್ಲ. ಆರೋಪಿತಳಿಗೆ ಕುಮಟಾ ಶಾಖೆಯಿಂದಲೇ ಸಾಲ ಮಂಜೂರಾಗಿರುತ್ತದೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ